**ಓ.ಎಸ್.ನಂ.183/2015**
**ಪಿ ಡಬ್ಲ್ಯೂ: 1**

**ದಿನಾಂಕ 27.11.2020 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ.ಡಿ.ಎನ್.ಎಂ. ವಕೀಲರಿಂದ ಃ**

1 ನೇ ವಾದಿ ನನ್ನ ಅಣ್ಣ ಎಂದರೆ ಸರಿ. 1 ನೇ ವಾದಿ ವಿದ್ಯಾಭ್ಯಾಸ ಮಾಡಿರುವುದಿಲ್ಲ. 1 ನೇ ವಾದಿಯ ಮತ್ತು ನನ್ನ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ಸಹಿ ನನ್ನ ಅಣ್ಣನದ್ದು. ಸಾಕ್ಷಿ ವಾದ ಪತ್ರಕ್ಕೆ ಲಗತ್ತಿಸಿರುವ ಸತ್ಯ ಸಂಶೋಧನ ಪತ್ರದಲ್ಲಿರುವ ಟಿ.ಮಲ್ಲೇಶಪ್ಪ ಎಂಬ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಈಗ ನಾನು ನೋಡುತ್ತಿರುವ ಸಹಿ ನನ್ನ ದೊಡ್ಡಪ್ಪನ ಮಗ ಮಲ್ಲೇಶನದ್ದಾಗಿರುತ್ತದೆ. ಸಾಕ್ಷಿ ವಾದ ಪತ್ರದಲ್ಲಿ ಮಲ್ಲೇಶ್ ಎಂದು ಇರುವ ಸಹಿಯನ್ನು ನೋಡಿ ತಮ್ಮ ದೊಡ್ಡಪ್ಪನ ಮಗನದ್ದು ಎಂದು ನುಡಿಯುತ್ತಾರೆ.

ಪ್ರತಿವಾದಿಯರಿಗೂ ಮತ್ತು ನನ್ನ ದೊಡ್ಡಪ್ಪನ ಮಗ ಮಲ್ಲೇಶನಿಗೂ ವೈಶಮ್ಯ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮೊಂದಿಗೂ ಸಹ ಪ್ರತಿವಾದಿಯ ಸಂಬಂಧ ಸರಿ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರೆಲ್ಲ ಬಸಪ್ಪನ ವಾರಸುದಾರರು ಎಂದರೆ ಸರಿ. ದಾವಾ ಸ್ವತ್ತು 25 ಗುಂಟೆ ಜಮೀನು ಎಂದರೆ ಸರಿ. ಸದರಿ ಸ್ವತ್ತಿನ ಖಾತೆ ಬಸಪ್ಪನ ಹೆಸರಿಗೆ ಇತ್ತು ಎಂದರೆ ಸರಿ. ಬಸಪ್ಪ ಮೃತಪಟ್ಟ ನಂತರ ಪ್ರತಿವಾದಿಯರ ಹೆಸರಿಗೆ ಖಾತೆಯಾಗಿತ್ತು ಎಂದರೆ ಸರಿ. ಪ್ರತಿವಾದಿಯರೆ ದಾವಾ ಸ್ವತ್ತಿನ ಕಂದಾಯ ಕಟ್ಟಿ ಕೊಂಡು ಅನುಭವಿಸುತ್ತಿದ್ದಾರೆ ಎಂದರೆ ಸರಿ. ಬಸಪ್ಪನ ಅಣ್ಣ ಗೋವಿಂದಪ್ಪನಿಂದ ದಾವಾ ಸ್ವತ್ತನ್ನು ಖರೀದಿಸಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಗೋವಿಂದಪ್ಪ ಎಂದಿಗೂ ಸಹ ಊರಿನಲಿ ಇರಲಿಲ್ಲ ಎಂದರೆ ಸರಿಯಲ್ಲ. ಗೋವಿಂದಪ್ಪ ಚಿಕ್ಕವನಿದ್ದಾಗಲೆ ಊರು ಬಿಟ್ಟಿರುತ್ತಾನೆ ಎಂದರೆ ಸರಿ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ದಾವೆಯಲ್ಲಿ 12 ವರೆ ಗುಂಟೆ ಜಮೀನು ನಮಗೆ ಬರಬೇಕೆಂದು ಬರೆಸಿರುತ್ತೇನೆ. ಸದರಿ 12 ವರೆ ಗುಂಟೆ ಜಮೀನಿನ ಚೆಕ್ಕುಬಂದಿ ಹೇಳಲು ಆಗುವುದಿಲ್ಲ ಎಂದರೆ ಸರಿ. ನಾನು ಮತ್ತು ನನ್ನ ದೊಡ್ಡಪ್ಪನ ಮಗ

ಮಲ್ಲೇಶ ದಾವಾ ಸ್ವತ್ತನ್ನು ಲಪಟಾಯಿಸು ಉದ್ದೇಶದಿಂದ ನಿಪಿ1 ರ ಕ್ರಯ ಪತ್ರವನ್ನು ಸೃಷ್ಟಿಸಿರುತ್ತೇವೆಂದರೆ ಸರಿಯಲ್ಲ. ನನ್ನ ತಂದೆ ತಿಮ್ಮಣ್ಣ ಮತ್ತು 1 ನೇ ಪ್ರತಿವಾದಿಯ ಗಂಡ ಬಸಪ್ಪ ಮಂಗಲ್ ಪ್ರಸಾದ್ ಮನೆತನಕ್ಕೆ ಸೇರಿದವರು ಎಂದರೆ ಸರಿ. ಸರ್ವೇ ನಂ. 26 ರ ಜಮೀನಿನಲ್ಲಿ ನಮ್ಮ ಕುಟುಂಬಕ್ಕೆ 25 ಗುಂಟೆ ಜಮೀನು ಬಂದಿತ್ತು ಎಂದರೆ ಸರಿಯಲ್ಲ. ನಮಗೆ ಬಂದಿದ್ದ 25 ಗುಂಟೆ ಜಮೀನನ್ನು ನನ್ನ ತಂದೆ ಈ ಹಿಂದೆಯೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ.

ದಾವಾ ಸ್ವತ್ತು ನಮ್ಮ ಊರಿಗೆ ಹತ್ತಿರದಲ್ಲಿದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನಿವೇಶನಗಳನ್ನು ಮಾಡಲು ಅನುಕೂಲ ಇರುತ್ತದೆ ಎಂದರೆ ಸರಿ. ಆದ್ದರಿಂದ ದಾವಾ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ನಾನು ಮತ್ತು ನನ್ನ ದೊಡ್ಡಪ್ಪನ ಮಗ ಮಲ್ಲೇಶ ಸುಳ್ಳು ದಾವೆಯನ್ನು ತಂದಿರುತ್ತೇವೆಂದರೆ ಸರಿಯಲ್ಲ. ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಪ್ರತಿವಾದಿಯರೆ ಅನುಭವಿಸುತ್ತಿರುವುದರಿಂದ ಅವರೆ ಸಂಪೂರ್ಣ ಮಾಲೀಕರು ಮತ್ತು ಹಕ್ಕು ದಾರರು ಇರುತ್ತಾರೆಂದರೆ ಸರಿಯಲ್ಲ. ನಮಗೂ ಮತ್ತು ದಾವಾ ಸ್ವತ್ತಿಗೂ ಯಾವುದೆ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ.
ಹೊಸದುರ್ಗ .